(ದಿನಾಂಕಃ 22-03-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

ಪಾಟೀ ಸವಾಲು ಃ ಶ್ರೀ ಪಿ.ಆರ್.ಸಿ 2, 4, 6 ನೇ ಪ್ರತಿವಾದಿ ಪರ ವಕೀಲರಿಂದ -

ನಾನು 10 ನೇ ತರಗತಿವರೆಗೆ ಶಾಲೆ ಕಲಿತಿರುತ್ತೇನೆ. ಬಾಳಪ್ಪಾ ಶೆಟ್ಟೆಪ್ಪ ಮತ್ತು ನಾವು ಅಣ್ಣ ತಮ್ಮಂದಿರರು ಇರುತ್ತೇವೆ. ಬಸಪ್ಪ ಶಿವಪ್ಪ ಹರಿಜನ ಮತ್ತು 3 ಮಂದಿ ಹೆಣ್ಣು ಮಕ್ಕಳ ನಡುವೆ ದಾವೆ ನಡೆದದ್ದು ಇರುತ್ತದೆ. ಸದ್ರಿ ಬಸಪ್ಪ ಶಿವಪ್ಪ ಹರಿಜನ ಮೂಲತಃ ಯರಗಟ್ಟಿ ಗ್ರಾಮದಲ್ಲಿ ಹುಟ್ಟಿರುತ್ತಾನೆ ಎಂದರೆ ಸರಿ. ನನ್ನ ಬಾಹುಬಂದಿಗಳಾದ ಬಾಳಪ್ಪ ಮತ್ತು ಶೆಟ್ಟೆಪ್ಪನನ್ನು ನೋಡಿರುತ್ತೇನೆ ಅವರ ತಂದೆ ಗೂಳಪ್ಪನನ್ನು ನೋಡಿರುವುದಿಲ್ಲ. ಗೂಳಪ್ಪ ಹೊಲೇರ ಗುಡಸ ಗ್ರಾಮದವನು ಎಂದರೆ ಸರಿ . ಶಿವಪ್ಪ ಹರಿಜನ ಯರಗಟ್ಟಿ ಗ್ರಾಮದವನು ಎಂದರೆ ಸರಿ. ಸದ್ರಿ ಶಿವಪ್ಪ ಹರಿಜನ ಈತನನ್ನು ನಾನು ನೋಡಿರುವುದಿಲ್ಲ. ಆತ ಯರಗಟ್ಟಿಯಲ್ಲಿ ಮೃತನಾಗಿರುತ್ತಾನೆ ಎಂದರೆ ಸರಿ . ಬಾಳಪ್ಪನ ಅಪ್ಪ ಗೂಳಪ್ಪ ಹೊಲೇರ ಮತ್ತು ಶಿವಪ್ಪ ಹರಿಜನ ಇಬರಿಬ್ಬರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ . ಅವರಿಬ್ಬರ ಮನೆತನ ಬೇರೆ ಬೇರೆ ಎಂದರೆ ಸರಿ.

ಗುಡಸ ಗ್ರಾಮದಲ್ಲಿರುವ ಜಮೀನ ಸರ್ವೆ ನಂ. 476 ಇರುತ್ತದೆ. ದಾವಾ ಜಮೀನಿನ ಪೂರ್ವಕ್ಕೆ ನನಗೆ ಸಂಬಂಧಿಸಿದ 475 ರ ಜಮೀನು ಇರುತ್ತದೆ. 475 ರ ಪೂರ್ವ ಬಾಜು 2 ಫರ್ಲಾಂಗ ಅಂತರದಲ್ಲಿ 374 ರ ಜಮೀನು ಇರುತ್ತದೆ ಎಂದರೆ ಸರಿ. ಸದ್ರಿ 374 ರ ಜಮೀನಿನಲ್ಲಿ ಒಟ್ಟು 16 ಗುಂಟೆ ಇದ್ದು ಇದರ ಪೈಕಿ 8 ಗುಂಟೆ ಬಾಳಪ್ಪನ ತಂದೆ ಗೂಳಪ್ಪ ಈತನಿಗೆ ಬಂದಿತ್ತು ಎಂದರೆ ಸರಿ . ಉಳಿದ 8 ಗುಂಟೆಯ ಮಾಲೀಕರು ಬೇರೆ ಬೇರೆ ಇರುತ್ತಾರೆ ಎಂದರೆ ಸರಿ. ಸದ್ರಿ 8 ಗುಂಟೆಯಲ್ಲಿ ಬಸಪ್ಪ ಶಿವಪ್ಪ ಹರಿಜನ ಈತನು ಸಾಗು ಮಾಡುತ್ತಿಲ್ಲ ಎಂದರೆ ಈಗ್ಗೆ 7-8 ವರ್ಷಗಳಿಂದ ಮಾಡುತ್ತಿಲ್ಲ ಎನ್ನುತ್ತಾರೆ. ಸದ್ರಿ 16 ಗುಂಟೆ ಜಮೀನಿನಲ್ಲಿ ಯಾವುದೇ ಭಾಗದಲ್ಲಿ ಬಸಪ್ಪ ಶಿವಪ್ಪ ಹರಿಜನ ಕಬ್ಜಾದಲ್ಲಿ ಇಲ್ಲ ಎಂದರೆ ಈಗ್ಗೆ 7-8 ವರ್ಷಗಳಿಂದ ಕಬ್ಜಾದಲ್ಲಿ ಇಲ್ಲ .

ಬಸಪ್ಪ ಶಿವಪ್ಪ ಹರಿಜನ ಈತನಿಗೆ ಜಮೀನು ಶೆಟ್ಟೆಪ್ಪ ರಾತನು ಭಕ್ಷೀಸು ಬರೆದುಕೊಟ್ಟ ಆಧಾರದ ಮೇಲೆ ಬಂದಿರುತ್ತದೆ. 1962 ರಲ್ಲಿ ಅಂತಹ ಭಕ್ಷೀಸು ಪತ್ರ ಆಗಿರುತ್ತದೆ . ಅದನ್ನು ನಾನು ನೋಡಿರುತ್ತೇನೆ. 2 ಹೊಲ ಮತ್ತು 1 ಮನೆ ಸಂಬಂಧ ಸದ್ರಿ ಭಕ್ಷೀಸು ಪತ್ರದಲ್ಲಿ ನಮೂದಿಸಲಾಗಿದೆ . ಮನೆ ನಂಬರ ಗೊತ್ತಿಲ್ಲ. ಭಕ್ಷೀಸು ಪತ್ರದಲ್ಲಿ ನಮೂದಿಸಿದ ಮನೆಯಲ್ಲಿ ಬಾಳಪ್ಪನ ಹೆಂಡತಿ ದುಂಡವ್ವ ಇರುತ್ತಾಳೆ ಎಂದರೆ ಸಾಕ್ಷಿ 1

ಭಾಗದಲ್ಲಿ ದುಂಡವ್ವ ಮತ್ತು ಇನ್ನೊಂದು ಭಾಗದಲ್ಲಿ ಶೆಟ್ಟೆಪ್ಪನ ಮಗಳು ಬಸವ್ವ ಇರುತ್ತಳೆ ಎಂದು ನುಡಿಯುತ್ತಾರೆ. ಸದ್ರಿ ಮನೆಯಲ್ಲಿ ಬಸಪ್ಪ ಯಾವಾಗಲೂ ಕಬ್ಜಾದಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ಮೊದಲು ಎಲ್ಲರೂ ಕೂಡಿ ಇದ್ದರು ಎನ್ನುತ್ತಾರೆ.

ಬಾಳಪ್ಪನ ಅಣ್ಣ ಶೆಟ್ಟೆಪ್ಪ 1983 ರಲ್ಲಿ ತೀರಿಕೊಂಡಿರುತ್ತಾನೆ ಎಂದರೆ ಸರಿ . ಬಾಳಪ್ಪ 2008 ರಲ್ಲಿ ತೀರಿಕೊಂಡಿರುತ್ತಾನೆ ಎಂದರೆ ಸರಿ. ಅವರಿಬ್ಬರ ಸಹೋದರಿ ತಂಗೆವ್ವಾ ಮದುವೆಯಾಗಿ ಸುಮಾರು 40-45 ವರ್ಷವಾಗಿದ್ದು ಚಿಕ್ಕಾಲಗುಡ್ಡದಲ್ಲಿರುತ್ತಾಳೆ ಎಂದರೆ ಸರಿ. ಮದುವೆಯಾದ ನಂತರ ಅಂದಿನಿಂದ ಅಕೆ ದಾವಾ ಸ್ವತ್ತಿನಲ್ಲಿ ಕಬ್ಜಾ ವೈವಾಟು ಮಾಡಿಲ್ಲ ಎಂದರೆ ಆಗಾಗ ಕಾರ್ಯಕ್ರಮಕ್ಕೆ ಬರುತ್ತಿದ್ದಳು ಎನ್ನುತ್ತಾರೆ.

ಶೆಟ್ಟೆಪ್ಪನ ಹೆಂಡತಿ ಶಿವಲಿಂಗವ್ವ ಮೊದಲು ಶಿವಪ್ಪ ಹರಿಜನ ಎಂಬಾತನನ್ನು ಮದುವೆಯಾಗಿದ್ದಳು ಎಂರದೆ ಸರಿ. ಆಕೆ ಯಾವ ಸಾಲಿನಲ್ಲಿ ಶೆಟ್ಟೆಪ್ಪನನ್ನು ಮದುವೆಯಾಗಿದ್ದಾಳೆ ಎಂದು ನನಗೆ ಗೊತ್ತಿಲ್ಲ, ನಾನು ಮದುವೆಗೆ ಹೋಗಿಲ್ಲ . ಆಕೆ ಶೆಟೆಪ್ಪನ ಹೆಂಡತಿ ಎಂದು ತೋರಿಸಲು ನಾನು ಯಾವುದೇ ದಾಖಲೆ ನೋಡಿರುವುದಿಲ್ಲ.ಶಿವಲಿಂಗವ್ವಳ ತವರುಮನೆ ಯರಗಟ್ಟಿ ಇರುತ್ತದೆ. ಶಿವಲಿಂಗವ್ವ ಶೆಟೆಪ್ಪನನ್ನು ಮದುವೆಯಾದ ಕಾಲಕ್ಕೆ ಬಸಪ್ಪ ಎಷ್ಟು ವರ್ಷದವನು ಇದ್ದನು ಎಂದು ನನಗೆ ಗೊತ್ತಿಲ್ಲ. ಮುಂದುವರೆದು ಆತ ಸಣ್ಣವನಿದ್ದನು ಎನ್ನುತ್ತಾರೆ. ಬಸಪ್ಪನನ್ನು ಆತನ ತಾಯಿ ಯರಗಟ್ಟಿಯಿಂದ ಕರೆದುಕೊಂಡು ಬಂದಿದ್ದನ್ನು ನಾನು ಸ್ವತಃ ನೋಡಿರುವುದಿಲ್ಲ.

ಶೆಟ್ಟೆಪ್ಪನ ಮೂರು ಜನ ಹೆಣ್ಣುಮಕ್ಕಳು ಯಾವ ಸಾಲಿನಲ್ಲಿ ಹುಟ್ಟಿರುತ್ತಾರೆ ಎಂಬ ಬಗ್ಗೆ ನಾನು ದಾಖಲೆ ನೋಡಿರುವುದಿಲ್ಲ. ಶೆಟ್ಟೆಪ್ಪ ತೀರಿಕೊಂಡ ಬಳಿದ ಆತನ ವಾರಸುದಾರನೆಂದು ತಮ್ಮನ ಹೆಸರು ಬಾಳಪ್ಪನ ಹೆಸರು ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಭಕ್ಷೀಸು ಪತ್ರದಲ್ಲಿ ಶೆಟ್ಟೆಪ್ಪನು ಬಸಪ್ಪ ತನ್ನ ಸಾಕು ಮಗ ಎಂದು ಉಲ್ಲೇಖಿಸಿರುತ್ತಾನೋ ಇಲ್ಲವೋ ಎಂದು ನಾನು ನೋಡಿರುವುದಿಲ್ಲ. ಮುಂದುವರೆದು ಸದ್ರಿ ಬಸಪ್ಪ ಶೆಟೆಪ್ಪನ ಸಾಕು ಮಗ ಎಂದು ನಾನು ಹೇಳಿಲ್ಲ ಎನ್ನುತ್ತಾರೆ. ಆದರೆ ಬಾಲ್ಯದವನಿದ್ದಾಗಲೇ ಆತನನ್ನು ಕರೆದುಕೊಂಡು ಬಂದಿದ್ದರು. ಶೆಟ್ಟೆಪ್ಪ ತೀರಿಕೊಂಡ ಬಳಿಕ ಆತನ ಸಹೋದರ ಬಾಳಪ್ಪ ಮತ್ತು ಬಸಪ್ಪ ಶಿವಪ್ಪ ಹರಿಜನ ಇವರ ಹೆಸರು ದಾಖಲ ಆಗಿತ್ತು. ಶೆಟ್ಟೆಪ್ಪನ 3 ಹೆಣ್ಣು ಮಕ್ಕಳ ಹೆಸರುಗಳು ಉರಾತಿನಲ್ಲಿ ಯಾವಾಗಲೂ ದಾಖಲ ಆಗಿಲ್ಲ ಎಂದರೆ ಸರಿ. ಶೆಟ್ಟೆಪ್ಪನ 3 ಮಕ್ಕಳು ನ್ಯಾಮವ್ವ, ಬಸವ್ವ ಮತ್ತು ತುಳಸವ್ವ ಇವರು ಬಸಪ್ಪನ ಹೆಸರಿನಲ್ಲಿ ಹಕ್ಕು ಬಿಟ್ಟ ಪತ್ರವನ್ನು 1984 ರಲ್ಲಿ ಬರೆದುಕೊಟ್ಟಿರುತ್ತಾರೆ. ಸದ್ರಿ ಹಕ್ಕು ಬಿಟ್ಟ ಪತ್ರ ನೊಂದು ಇರುತ್ತದೊ ಸಾದಾ ಇರುತ್ತದೊ ಎಂದರೆ ಅದನ್ನು ನಾನು ನೋಡಿಲ್ಲ ಎನ್ನುತ್ತಾರೆ.

ಶಿವಲಿಂಗವ್ವ , 3 ಜನ ಹೆಣ್ಣು ಮಕ್ಕಳು ಮತ್ತು ಬಸಪ್ಪ  ಇವರು ಶಿವಲಿಂಗವ್ವ ಈಕೆಯ ಹಯಾಯಿತಿ ಕಾಲದವರೆಗೂ ಕೂಡಿಯೇ ಇದ್ದರು. ಸದ್ರಿ ಶಿವಲಿಂಗವ್ವ ಯಾವ ಸಾಲಿನಲ್ಲಿ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದ್ರಿಯವರು ಕೂಡಿ ಇದ್ದ ಬಗ್ಗೆ ಫೋಟೊ ಇಲ್ಲ.

ಶಿವಲಿಂಗವ್ವ ಮತ್ತು ಶೆಟ್ಟೆಪ್ಪನಿಗೆ 3 ಜನ ಹೆಣ್ಣು ಮಕ್ಕಳು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶೆಟ್ಟೆಪ್ಪನಿಗೆ ಆಸ್ಪತ್ರೆಗೆ ಕರೆದುಕೊಂಡು ಹೋದ ಬಗ್ಗೆ ದಾಖಲೆ ಇರುವುದಿಲ್ಲ, ಆದರೆ ಆತನ ಊಟ ಮತ್ತು ಬಟ್ಟೆ ಮತ್ತು ಸಣ್ಣ ಪುಟ್ಟ ಕಾಯಿಲೆಗೆ ಬಸಪ್ಪನೇ ಆಸಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸಿದ್ದಾನೆ.  ಬಸಪ್ಪ ಶೆಟ್ಟೆಪ್ಪನ ಸಂರಕ್ಷಣೆ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಶೆಟ್ಟೆಪ್ಪನ 3 ಜನ ಹೆಣ್ಣು ಮಕ್ಕಳು ಬಸಪ್ಪನಿಗೆ ಹಕ್ಕು ಬಿಟ್ಟ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಬಾಳಪ್ಪ ಈತನು 2008 ನೇ ಸಾಲಿನಲ್ಲಿ ತೀರಿಕೊಂಡಿದ್ದು ಆಗ ಆತನ ವಯಸ್ಸು ಸುಮಾರು 75 ವರ್ಷ ಆಗಿತ್ತು ಎಂದರೆ ಸರಿ.  ಬಾಳಪ್ಪನ ಇಬ್ಬರು ಮಂದಿ ಮಕ್ಕಳು ಗೂಳಪ್ಪ ಮತ್ತು ಮಾರುತಿ ಇವರು ಸುಮಾರು 25 ವರ್ಷ ಮಿಲಿಟರಿಯಲ್ಲಿದ್ದರು ಎಂದರೆ ಸರಿ. ಸದ್ರಿಯವರು ಸೂಟಿ ಇದ್ದಾಗ ಮಾತ್ರ ಬರುತ್ತಿದ್ದರು ಎಂದರೆ ಸರಿ. ಬಾಳಪ್ಪನ ಹೆಣ್ಣು ಮಕ್ಕಳು ಲಕ್ಷ್ಮಿ ಮತ್ತು ಕೆಂಪವ್ವ 5 ಮತ್ತು 4 ನೇ ಪ್ರತಿವಾದಿಯರು ಮದುವೆಯಾಗಿ 40 ವರ್ಷಗಳಾಗಿದ್ದು ದಾವಾ ಜಮೀನಿನಲ್ಲಿ ಸಾಗು ಮಾಡುತ್ತಿಲ್ಲ ಎಂದರೆ ಸರಿ. ಬಾಳಪ್ಪ ತೀರಿಕೊಳ್ಳುವ ವೇಳೆಗೆ ಕಣ್ಣು ಕಾಣಿಸುತ್ತಿರಲಿಲ್ಲ ಅಶಕ್ತನಾಗಿದ್ದನು ಎಂದರೆ ಸರಿಯಲ್ಲ. 3 ಎಕರೆ 12 ಗುಂಟೆ ಸಂಬಂಧ ಬಾಳಪ್ಪನು ತನ್ನ ಜೀವಿತ ಕಾಲದಲ್ಲಿ ತನ್ನ ಸೊಸೆ 6 ನೇ ಪ್ರತಿವಾದಿ ಹೆಸರಿನಲ್ಲಿ 2003 ರಲ್ಲಿ ಹಕ್ಕು ಬಿಟ್ಟ ಪತ್ರವನ್ನು ಮಾಡಿಕೊಟ್ಟಿರುತ್ತಾನೆ ಎಂದರೆ ಸರಿ. ಆಗಿನಿಂದ 6 ನೇ ಪ್ರತಿವಾದಿ 3 ಎಕರೆ 12 ಗುಂಟೆಯಲ್ಲಿ ಕಬ್ಜಾ ವೈವಾಟು ಮಾಡುತ್ತಿದ್ದಾಳೆ ಎಂದರೆ ಸಾಕ್ಷಿ ಅರ್ಧ ಅರ್ಧ ಪಾಲಪಿನಲ್ಲಿ ಸಾಗು ಮಾಡುತ್ತಿದ್ದಾರೆ ಎನ್ನುತ್ತಾರೆ. 475 ರ ಪಶ್ಚಿಮ ಬಾಜು ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ಮುಖ  ಮಾಡಿ 1 ಕೆಂಪು ಹಂಚಿನ ಮನೆ ಇರುತ್ತದೆ ಎಂದರ ಸರಿ . ಸದ್ರಿ ಮನೆಯಲ್ಲಿದ್ದಾಗ ಬಾಳಪ್ಪ ತೀರಿಕೊಂಡಿರುತ್ತಾನೆ ಎಂದರೆ ಸರಿ . ಸದ್ರಿ ಮನೆಯನ್ನು 2005 ನೇ ಸಾಲಿನಲ್ಲಿ ಕಟ್ಟಿರುತ್ತಾರೆ ಎಂದರೆ ಸಾಕ್ಷಿ 2008 ನೇ ಸಾಲಿನಲ್ಲಿ ಕಟ್ಟಿರಬಹುದು ಎನ್ನುತ್ತಾರೆ .  ಬಾಳಪ್ಪ ಸತ್ತ ಬಳಿಕ ಆತನ ಮಗ ಗೂಳಪ್ಪ ಮತ್ತು ಹೆಂಡತಿ ಸ್ವಪ್ನ ಮತ್ತು ಮಕ್ಕಳು ವಾಸ ಇರುತ್ತಾರೆ ಎಂದರೆ ಸರಿ . ಅಂತಹ ಮನೆ ಕಟ್ಟಲು ಸುಮಾರು 1 ಲಕ್ಷ್ಯ ಖರ್ಚಾಗುತ್ತದೆ ಎಂದರೆ ಕಡಿಮೆ ಆಗುತ್ತದೆ ಎನ್ನುತ್ತಾರೆ.  ಸುಮಾರು 50 ಸಾವಿರ ರೂ. ಖರ್ಚಾಗಿರಬಹುದು. ಸದ್ರಿ ಕೆಂಪು

ಹಂಚಿನ ಉತ್ತರ ಬಾಜು ದನಗಳ ಶೆಡ್ಡು ಕಟ್ಟಿರುತ್ತಾರೆ ಎಂದರೆ ಸರಿ . ಅದರಲ್ಲಿ ಆಕೆಯ ದನಗಳನ್ನು ಕಟ್ಟುತ್ತಿದ್ದಾಳೆ ಎಂದರೆ ಸರಿ.

3 ನೇ ಪ್ರತಿವಾದಿ ಮಿಲಿಟರಿಯಲ್ಲಿ ನಿವೃತ್ತಿ ಹೊಂದಿದ ಬಳಿಕ ಆತ ತನ್ನ ಹೆಂಡತಿ ಮತ್ತು ಮಕ್ಕಳ ಜೊತೆಗೆ ಬೆಳಗಾವಿಯಲ್ಲಿ ವಾಸ ಇರುತ್ತಾರೆ ಎಂದರೆ ಸರಿ. ಮುಂದುವರೆದು 3 ನೇ ಪ್ರತಿವಾದಿ ಖಾಸಗಿ ನೌಕರಿ ಮಾಡುತ್ತಿದ್ದಾನೆ ನುಡಿಯುತ್ತಾರೆ. 40 ವರ್ಷಗಳಿಂದ ಸದ್ರಿ ಜಮೀನಿನಿಂದ ಸಾಗು ಮಾಡುತ್ತಿಲ್ಲ ಎಂದರೆ ಮಿಲಿಟರಿ ಸೇವೆಯಲ್ಲಿದ್ದಾಗ ಹೋಗಿ ಬಂದು ಮಾಡುತ್ತಿದ್ದ ಈಗ ಬರುತ್ತಿಲ್ಲ ಎನ್ನುತ್ತಾರೆ. ಸರ್ವೆ ನಂ. 374 ಮತ್ತು 475 ದಕ್ಷಿಣ ಬಾಜುದಲ್ಲಿ 40 ವರ್ಷಗಳಿಂದ ಕಿನಾಲು ಇದೆ ಎಂದರೆ ಸರಿ. 30 ವರ್ಷಗಳಿಂದ ಸದ್ರಿ ಕಿನಾಲಿನ ಆಜು ಬಾಜು ನೀರಾವರಿ ಜಮೀನುಗಳು ಆಗಿದ್ದು ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ ಎಂದರೆ ಸರಿ. ನಮ್ಮ ಜಮೀನಿನ ಸರ್ವೆ ನಂ. 476 ಇದ್ದು ಅದು ಕೆಂಪು ಮಣ್ಣಿನ ಜಮೀನು ಇರುತ್ತದೆ . 475 ಕೆಂಪು ಮತ್ತು ಕರಿ ಮಣ್ಣಿನ ಮಿಶ್ರಿತ ಇರುತ್ತದೆ. ಕಳೆದ 6 ವಶಷಗಳಿಂದ ಎಕರೆಗೆ 20-25 ಲಕ್ಷ್ಯ ಕಿಮ್ಮತ್ತು ಇದೆ ಎಂದರೆ ಸರಿ. ನಾನು ರಿ . ಸ ನಂ. 475 ರ 6 ನೇ ಪ್ರತಿವಾದಿ ಕಳೆದ 6 ವರ್ಷಗಳಿಂದ ಕಬ್ಬು ಬೆಳೆ ಬೆಳೆಯುತ್ತಿದ್ದಾಳೆ ಎಂದರ ಮೊದಲು ಇಬ್ಬರೂ ಸೇರಿ ಬೆಳೆಯುತ್ತಿದ್ದು ಈಗ 2006 ರಿಂದ ತಂಟೆಯಾದ ನಂತರ 6 ನೇ ಪ್ರತಿವಾದಿ ಮಾತ್ರ ಕಬ್ಜಾ ತೆಗೆದುಕೊಂಡು ಬೆಳೆ ಬೆಳೆಯುತ್ತಿದ್ದಾಳೆ ಎನ್ನುತ್ತಾರೆ. 2006 ರಿಂದ ಕಬ್ಬನ್ನು ಆಕೆ ಬೆಳೆದು ರೊಕ್ಕ ಸಹ ಆಕೆಯೇ ಪಡೆಯುತ್ತಿದ್ದಾಳೆ ಎಂದರೆ ಸರಿ. 2003 ರಿಂದ 6 ನೇ ಪ್ರತಿವಾದಿಯೇ ಜಮೀನಿನ ಕಬ್ಜಾದಲ್ಲಿದ್ದು ಬೆಳೆ ಬೆಳೆದುಕೊಂಡು ಬಂದಿರುತ್ತಾಳೆ ಎಂದರೆ ಸರಿಯಲ್ಲ. ಅದೇ ರೀತಿ 8 ಗುಂಟೆ ಜಮೀನಿನಲ್ಲಿ 6 ನೇ ಪ್ರತಿವಾದಿ ಕಬ್ಜಾ ವೈವಾಟು ಮಾಡುತ್ತಿದ್ದಾಳೆ ಎಂದರೆ ಸರಿ. ರಿ .ಸ ನಂ. 475 ಮತ್ತು 476 ರ ನಡುವೆ ಸೀಮೆ ಇದ್ದು ಅದರ ಸಂಬಂಧ ನನಗೂ 6 ನೇ ಪ್ರತಿವಾದಿಗೂ ತಂಟೆ ನಡೆದಿತ್ತು ಎಂದಿರೆ ಸರಿಯಲ್ಲ. ಈಗ 10 ವರ್ಷಗಳಿಂದ ಆಕೆಗೂ ನನಗೂ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. ಬಸಪ್ಪನ ಹೆಸರಿಗೆ 1962 ರಲ್ಲಿ ಭಕ್ಷೀಸು ಪತ್ರ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ಯಾವಾಗಲೂ ನಾನು ಸಾಗು ಮಾಡಿಲ್ಲ ಎಂದರೆ ಸರಿಯಲ್ಲ. ಆತನಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ